ಪುಸ್ತಕ ಪಾಂಡಿತ್ಯಕ್ಕೂ ಅಜಗಜಾಂತರವಿದೆ. ಕಲಿತ ವಿಷಯಗಳು ವ್ಯಕ್ತಿಗೆ ಹೃದ್ಗತವಾಗಿ ಅವನ ಪ್ರತಿಯೊಂದು ನಡೆನುಡಿಯಲ್ಲೂ ಕಂಡುಬರಬೇಕು. ಆಗಲೇ ಅದು ಪರಿಪೂರ್ಣ ಶಿಕ್ಷಣವಾಗುತ್ತದೆ."

ಹೀಗೆಂದು ಹೇಳಿದ ಸ್ವಾಮೀಜಿ ತಮ್ಮ ಗುರುದೇವರಾದ ಶ್ರೀರಾಮಕೃಷ್ಣರ ಜೀವನವನ್ನು ಮಹಾರಾಜನಿಗೆ ತಿಳಿಸಿದರು. ಈ ಬಗೆಯ ಸಂಭಾಷಣೆಯಿಂದ ಪ್ರಭಾವಿತನಾದ ರಾಜಾ ಅಜಿತ್ ಸಿಂಗ್ ಸ್ವಾಮೀಜಿಯವರನ್ನು ತನ್ನ ಗುರುವಾಗಿ ಸ್ವೀಕರಿಸಿ ಧನ್ಯನಾದ.

ಸ್ವಾಮೀಜಿ ಚೆನ್ನೈನಲ್ಲಿದ್ದಾಗ ಒಂದು ತಮಾಷೆಯ ಘಟನೆ ನಡೆಯಿತು. ಒಂದು ದಿನ ಅಲ್ಲಿನ ಕ್ರಿಶ್ಚಿಯನ್ ಕಾಲೇಜಿನ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾಗಿದ್ದ ಸಿಂಗಾರವೇಲು ಮುದಲಿಯಾರ್ ಸ್ವಾಮೀಜಿಯವರನ್ನು ಕಾಣಲು ಬಂದರು. ಇವರು ಹಿಂದೂ ಧರ್ಮಕ್ಕಿಂತಲೂ ಕ್ರೈಸ್ತಧರ್ಮವೇ ಹೆಚ್ಚು ಅನುಷ್ಠಾನಯೋಗ್ಯವೆಂದು ಭಾವಿಸಿ, ಹಿಂದೂ ಧರ್ಮವನ್ನು ಟೀಕಿಸುತ್ತಿದ್ದರು. ಸ್ವಾಮೀಜಿ ಹಿಂದೂ ಧರ್ಮವನ್ನು ಬಲವಾಗಿ ಸಮರ್ಥಿಸುವ ವಿಚಾರ ತಿಳಿದು, ಅವರೊಂದಿಗೆ ವಾದ ಮಾಡಿ ಸೋಲಿಸಬೇಕೆಂದು ಮುದಲಿಯಾರರು ಬಂದಿದ್ದರು. ಆದರೆ ಚರ್ಚೆ ಹೆಚ್ಚು ಕಾಲ ನಡೆಯಲಿಲ್ಲ. ಮುದಲಿ ಯಾರರ ಬತ್ತಳಿಕೆಯಲ್ಲಿದ್ದ ಬಾಣಗಳೆಲ್ಲ ನಿಷ್ಫಲವಾಗಿ ಬಿದ್ದವು. ವಾದಮಾಡಿ ಸೋಲಿಸಬೇಕೆಂದು ಬಂದವರು ಸೋತು ಕೈಮುಗಿದು ಸ್ವಾಮೀಜಿಯವರಿಗೆ ಶರಣಾಗಿ ಅವರ ಶಿಷ್ಯರಾದರು. ಇವರ ಬುದ್ಧಿಮತ್ತೆಯನ್ನೂ, ಪ್ರಾಮಾಣಿಕತೆಯನ್ನೂ ಸ್ವಾಮೀಜಿ ಬಹುವಾಗಿ ಮೆಚ್ಚಿಕೊಂಡರು. ಸಲಿಗೆಯಿಂದ ಅವರನ್ನು 'ಕಿಡಿ' ಎಂದು ಸಂಬೋಧಿಸುತ್ತಿದ್ದರು. ಒಮ್ಮೆ ಕಿಡಿಯ ಬಗ್ಗೆ ಹೀಗೆ ಹೇಳಿದರು, "ಅಂದು ಸೀಸರ್ ಹೇಳಿದ, 'ನಾ ಬಂದೆ, ನಾ ಕಂಡೆ, ನಾ ಗೆದ್ದೆ' ಅಂತ. ಆದರೆ ಇಂದು, ಈ ಕಿಡಿ ಬಂದ, ಕಿಡಿ ಕಂಡ, ಕಿಡಿಯೇ ಸೋತ!"

ಶಿಕಾಗೊ ಸರ್ವಧರ್ಮ ಸಮ್ಮೇಳನದ ಪ್ರಚಂಡ ಯಶಸ್ಸಿನ ಬಳಿಕ ಸ್ವಾಮೀಜಿಯವರು ಅಮೆರಿಕಾ ದೇಶದಾದ್ಯಂತ ಸಂಚರಿಸುತ್ತಾ ಅನೇಕ ಭಾಷಣಗಳನ್ನು ಮಾಡಿದರು. ಜನ ಅವರ ಚಲನವಲನಗಳನ್ನು ಕಂಡು ಅವರನ್ನು 'ಸುಂಟರಗಾಳಿ ಸಂನ್ಯಾಸಿ' ಎಂದರು. ಪ್ರಶ್ನೋತ್ತರ ಗಳಲ್ಲಿ ಅವರು ನೀಡುತ್ತಿದ್ದ ಜಾಣ್ಮೆಯ ಉತ್ತರಗಳನ್ನು ಕಂಡು ಅವರನ್ನು 'ಮಿಂಚಿನ ಮಾತುಗಾರ' ನೆಂದು ಕರೆದರು. ಸ್ವಾಮೀಜಿ ಯವರನ್ನು ಸಂದರ್ಶಿಸಿದ 'ಅಪೀಲ್ ಅವಲಾನ್ಚ್' ಎಂಬ ಪತ್ರಿಕೆ ಬರೆದದ್ದು ಹೀಗೆ: "ಸಂಭಾಷಣೆಗಳಲ್ಲಿ ಅವರು ಅತ್ಯಂತ ಆಹ್ಲಾದಕರ ವ್ಯಕ್ತಿ. ಅವರು ಬಳಸುವ ಪದಗಳು ಇಂಗ್ಲಿಷ್ ಭಾಷೆಯ ರತ್ನಗಳು. ಒಬ್ಬ ಸಂಭಾಷಣಾಚತುರನಾಗಿ ಅವರು ಇಡೀ ಪಾಶ್ಚಾತ್ಯ ಜಗತ್ತಿನಲ್ಲೇ ಅದ್ವಿತೀಯರಾದವರು. ಅವರು ಇಂಗ್ಲಿಷನ್ನು ಸ್ಪಷ್ಟವಾಗಿ ಮಾತ್ರವಲ್ಲದೆ ನಿರರ್ಗಳವಾಗಿ ಮಾತನಾಡುತ್ತಾರೆ. ಹೊಚ್ಚ ಹೊಸದೂ ಪ್ರಖರವೂ ಆದ ಅವರ ಭಾವನೆಗಳು, ದಿಗ್ಭ್ರಮೆ ಗೊಳಿಸುವಷ್ಟು ಚೆನ್ನಾಗಿ, ಅಲಂಕಾರಮಯ ಭಾಷೆಯ ಮೂಲಕ, ಅವರ ನಾಲಗೆಯಿಂದ ಹೊರಬೀಳುತ್ತವೆ."

ಅಮೆರಿಕದ ಮತ್ತೊಂದು ಪತ್ರಿಕೆ ಹೀಗೆ ಬರೆದಿತ್ತು; "ಅವರ ಪ್ರತಿಯೊಂದು ಮಾತೂ, ಅವರ ಪ್ರತಿಯೊಂದು ಪ್ರಖರ – ಜೀವಂತ ಭಾವನೆಯೂ ಸಹಿಷ್ಣುತೆ, ಸತ್ಯ ಹಾಗೂ ಪವಿತ್ರತೆಯ ಸಂದೇಶ. ಸುಲಲಿತ ವಾಗ್ಝರಿಯ ತರ್ಕಬದ್ಧ ವಾಕ್‌ಸರಣಿಯ ಪಂಡಿತರಾದ ಅವರ ಬೆರಳತುದಿಗಳಲ್ಲಿ ಬೈಬಲ್, ಕೊರಾನ್, ವೇದಗಳು ಅಡಕವಾಗಿವೆ. ವಿದ್ಯುತ್ತಿನಂತಹ ಚುರುಕುತನದ ಸ್ಫುಟ ವಾದ ಮನಸ್ಸು ಅವರದ್ದು, ಅವರೊಬ್ಬ ಕಲಾಕಾರ, ಭಗವಂತನ ಶ್ರೇಷ್ಠತಮ ಸೇವಕ."

ಸ್ವಾಮೀಜಿಯವರು ಅಮೆರಿಕಾದಾದ್ಯಂತ ಪ್ರವಾಸ ಮಾಡುತ್ತಾ ಹಲವಾರು ಭಾಷಣಗಳನ್ನು ಮಾಡಿದರು, ಪ್ರಶ್ನೋತ್ತರಗಳಲ್ಲಿ ಭಾಗವಹಿಸಿದರು. ಅವರು ಬೋಧಿಸುತ್ತಿದ್ದುದು ಭಾರತದ ಹಿರಿಯ ಸಂಸ್ಕೃತಿಯ ಬಗ್ಗೆ, ವೇದಾಂತದ ಘನ ತತ್ತ್ವಗಳ ಬಗೆಗೆ. ಅವರ ವಿಚಾರಧಾರೆಗಳಿಂದ ಅತ್ಯಂತ ಪ್ರಭಾವಿತಳಾಗಿದ್ದ ಒಬ್ಬ ಮಹಿಳೆ ಸ್ವಾಮೀಜಿಯವರಲ್ಲಿ ದೂರಿತ್ತಳು, "ಸ್ವಾಮಿ, ನೀವು ನಿಮ್ಮ ಆತ್ಮ ತತ್ತ್ವದ ವಿಚಾರಗಳಿಂದ ನಮ್ಮನ್ನು ಸಂಮೋಹನಗೊಳಿಸುತ್ತಿದ್ದೀರಿ!" (Hypnotism).

ಸ್ವಾಮೀಜಿ ತಕ್ಷಣವೇ ಹೇಳಿದರು, "ಇಲ್ಲ ತಾಯಿ, ನೀವು ಅದಾಗಲೇ ಸಂಮೋಹನಗೊಂಡಿದ್ದೀರಿ. ನಾನು ಕೇವಲ ನಿಮ್ಮನ್ನು ಅದರಿಂದ ಹೊರಕ್ಕೆ ತರುತ್ತಿದ್ದೇನೆ, ಅಷ್ಟೇ!"

ಒಮ್ಮೆ ಪ್ರಶ್ನೋತ್ತರದ ಸಮಯದಲ್ಲಿ ಸ್ವಾಮೀಜಿಯವರ ಹತ್ತಿರದಲ್ಲೇ ನಿಂತಿದ್ದ ಒಬ್ಬ ವ್ಯಕ್ತಿ ಅವರನ್ನು ಪ್ರಶ್ನಿಸಿದ: "ಸ್ವಾಮೀಜಿ, ಸಂನ್ಯಾಸಿಗೂ (Monk), ಮಂಗಕ್ಕೂ (Monkey) ಇರುವ ವ್ಯತ್ಯಾಸ ವೇನು?"

ಆಗ ಸ್ವಾಮೀಜಿ ಸ್ವಲ್ಪವೂ ವಿಚಲಿತರಾಗದೆ, ಆ ವ್ಯಂಗ್ಯದ ಪ್ರಶ್ನೆಗೆ ಮತ್ತೊಂದು ರೀತಿಯಲ್ಲಿ ಉತ್ತರಿಸಿದರು.

ಸ್ವಾಮೀಜಿ, "ಒಂದು ಕೈ ಅಳತೆಯಷ್ಟು!"

ಈ ಉತ್ತರವನ್ನು ಪಡೆದ ಆ ವ್ಯಕ್ತಿ ತನ್ನ ನಿಜ ಸ್ವರೂಪವನ್ನು ಅರಿತು ಅಲ್ಲಿಂದ ಮಂಗಮಾಯವಾದ !!

ಸ್ವಾಮಿ ವಿವೇಕಾನಂದರೇ ಒಮ್ಮೆ ಹೇಳಿದ್ದಾರೆ, "ನಾನೊಂದು ಆಕಾರವಿಲ್ಲದ ಧ್ವನಿ ಮಾತ್ರ" ಎಂದು. ಅಂದರೆ ಶರೀರಧಾರಣೆ ತಾತ್ಕಾಲಿಕ, ಅವರ ಸಂದೇಶಗಳು ಸಾರ್ವಕಾಲಿಕ ಎಂದು ಇದರ ಅರ್ಥ.

ಈ ಮೇಲಿನ ಸಂಭಾಷಣೆಯ ತುಣುಕುಗಳು ಕೇವಲ ನಿದರ್ಶನಕ್ಕೆ ಮಾತ್ರ. ಅವರ ಜೀವನಚರಿತ್ರೆಯಲ್ಲಿ, ಸಮಗ್ರ ಕೃತಿಶ್ರೇಣಿ ಗಳಲ್ಲಿ ಇನ್ನೂ ಹೆಚ್ಚಿನ ಸಂಭಾಷಣೆಗಳು ಅಡಕವಾಗಿವೆ. ಇವುಗಳನ್ನು ಭಾವಿಸುತ್ತಾ ಓದಿಕೊಳ್ಳುವುದರಿಂದ ಹೆಚ್ಚಿನ ಆನಂದ, ಪ್ರಯೋಜನ ಓದುಗರಿಗೆ ಲಭಿಸುತ್ತದೆ.

ಸ್ವಾಮೀಜಿಯವರು ಅತ್ಯಂತ ಉನ್ನತ ಮಟ್ಟದ ನಡತೆಯನ್ನು ಹೊಂದಿದ್ದರು. ಭಾರತದ ಒಳಗೆ ಮತ್ತು ಹೊರಗೆ ಅವರು ಎಲ್ಲರೊಂದಿಗೆ ವ್ಯವಹರಿಸಿದ ರೀತಿ ಅತ್ಯಂತ ಶ್ರೇಷ್ಠಮಟ್ಟದ್ದಾಗಿತ್ತು. ಜಗತ್ತಿನ ಅತ್ಯಂತ ಉನ್ನತ ವ್ಯಕ್ತಿಗಳನ್ನೂ, ಜನಸಾಮಾನ್ಯರನ್ನೂ ಪ್ರಭಾವಗೊಳಿಸಿದ ಸ್ವಾಮಿ ವಿವೇಕಾನಂದರ ಮಾತುಗಳು, ಸಂಭಾಷಣೆಗಳು ನಮ್ಮೆಲ್ಲರಿಗೂ ಸದಾಕಾಲವೂ ಮಾರ್ಗದರ್ಶಿ ಯಾಗಿವೆ.



# ಶ್ರೀ ಮಾರಿಕಾಂಬಾ ದೇವಸ್ಥಾನ, ಶಿರಸಿ (ಉ.ಕ.)

## ಶ್ರೀ ದೇವಿಯ ಸನ್ನಿಧಿಯಲ್ಲಿ ನಡೆಯುವ ಸೇವೆಗಳು

| | | |
|---|---|---|
| 1. | ಪುಷ್ಪಾಂಜಲಿ ಅರ್ಚನೆ (ಹೂವಿನಿಂದ ಅರ್ಚನೆ) | ರೂ. 5–00 |
| 2. | ಅಷ್ಟೋತ್ತರ ಕುಂಕುಮಾರ್ಚನೆ | 10–00 |
| 3. | ಉಡಿ | 10–00 |
| 4. | ಪಂಚಾಮೃತ ಅಭಿಷೇಕ | 10–00 |
| 5. | ಮಹಾಪೂಜೆ | 51–00 |
| 6. | ಪಂಚರಸ ಫಲಾಭಿಷೇಕ ಅರ್ಚನೆ | 100–00 |
| 7. | ಪುಷ್ಪಾಲಂಕಾರ ಪೂಜೆ | 251–00 |

## ಶಾಶ್ವತ ಸೇವೆಗಳು
## (ವರ್ಷದಲ್ಲಿ ಒಂದು ದಿನದ ಪೂಜಾ ಅವಕಾಶ)

| | | |
|---|---|---|
| 1. | ಭಕ್ತಕೋಟಿ ನಿಧಿ ಸಂಚಯನದ ಅನ್ನಸಂತರ್ಪಣೆ | ರೂ. 1501–00 |
| 2. | ನಿರಂತರ ಸೇವೆ (ಸಪ್ತಶತಿ ಪಾರಾಯಣ) | 1501–00 |
| 3. | ನಿರಂತರ ಸೇವೆ (5 ಜನ ಮುತ್ತೈದೆಯರಿಗೆ ಉಡಿ ತುಂಬುವುದು ಹಾಗೂ ಪಾರಾಯಣ) | 5001–00 |
| 4. | ಪಲ್ಲಕ್ಕಿ ಉತ್ಸವದ ಪೂಜೆಯ ಬಗ್ಗೆ | 5001–00 |
| 5. | ದೀಪೋತ್ಸವ (ಶಾಶ್ವತ ದೀಪೋತ್ಸವ) | 5001–00 |

ಈ ಎಲ್ಲಾ ಸೇವೆಗಳಿಗೆ ದೇಣಿಗೆ ಸಲ್ಲಿಸುವವರು **'ಅಧ್ಯಕ್ಷರು, ಶ್ರೀ ಮಾರಿಕಾಂಬಾ ದೇವಸ್ಥಾನ, ಶಿರಸಿ'** (ಉ.ಕ.) ಇವರ ಹೆಸರಿಗೆ ಡಿ.ಡಿ. ಮುಖಾಂತರ ದೇಣಿಗೆ ನೀಡಿ ಪಾವತಿ ಪಡೆಯಬಹುದು.

ಸದ್ಭಕ್ತರು ಶ್ರೀ ದೇವಾಲಯಕ್ಕೆ ಆಗಮಿಸಿ ಶ್ರೀದೇವಿಯ ದರ್ಶನವನ್ನು ಪಡೆದು, ಸೇವೆ ಸಲ್ಲಿಸಿ, ಅನ್ನದಾನದ ಪುಣ್ಯಕಾರ್ಯದಲ್ಲಿ ಭಾಗಿಗಳಾಗಿ, ಶ್ರೀದೇವಿಯ ಆಶೀರ್ವಾದಯುಕ್ತ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ವಿನಂತಿಸುವ,

**ಶ್ರೀ ಮಂಜುನಾಥ ಜಿ. ಸಾಗರಕರ**
ಉಪಾಧ್ಯಕ್ಷರು

**ಶ್ರೀ ರಾಜಾರಾಮ್ ಎಂ. ಹೆಗಡೆ**
ಅಧ್ಯಕ್ಷರು

ಧರ್ಮದರ್ಶಿಗಳು:

**ಶ್ರೀ ಮಧುಕೇಶ್ವರ ಜಿ. ಹೆಗಡೆ** **ಶ್ರೀ ವಿ.ಯು. ಪಟಗಾರ** **ಶ್ರೀಮತಿ ಜ್ಯೋತಿ ವಿ. ಭಟ್ಟ**

# ಸ್ವಾಮಿ ವಿವೇಕಾನಂದರು ಮತ್ತು ಶ್ರೀಶಾರದಾ ಮಠ

ಪ್ರವ್ರಾಜಿಕಾ ಪರಮಪ್ರಾಣಾ

ಸ್ವಾಮಿ ವಿವೇಕಾನಂದರ ಜೀವನದ ಹತ್ತು ಹಲವು ಘನಕಾರ್ಯಗಳಲ್ಲಿ, ತ್ಯಾಗಶಾಲಿ ಮಹಿಳೆಯರಿಗಾಗಿ ಸಂನ್ಯಾಸಿ ಮಠವೊಂದನ್ನು ಸ್ಥಾಪಿಸುವುದಕ್ಕೆ ಬೇಕಾದ ಆಲೋಚನೆಯನ್ನು ಮಾಡಿದ್ದೂ ಒಂದು. ಈ ಮೂಲಕ ಸಂನ್ಯಾಸಿ ಸಂಪ್ರದಾಯದಲ್ಲಿ ದೊಡ್ಡ ಕ್ರಾಂತಿಯನ್ನೇ ಸ್ವಾಮೀಜಿ ಉಂಟುಮಾಡಿದರು. ಅದೇ ತದನಂತರ ಶ್ರೀಶಾರದಾ ಮಠದ ರೂಪವನ್ನು ತಳೆಯಿತು. ಈ ಕಥನವನ್ನು ವಿವರಿಸಿ ತಿಳಿಸಿಕೊಟ್ಟಿರುವ ಮಾತಾಜಿಯವರು, ದಕ್ಷಿಣೇಶ್ವರದಲ್ಲಿರುವ ಶ್ರೀಶಾರದಾ ಮಠದ ಪ್ರಧಾನ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ಲೇಖಕರಾದ ಇವರ ಹಲವಾರು ಲೇಖನಗಳು ಈಗಾಗಲೇ ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

೧೮೯೪ ರಲ್ಲಿ ಸ್ವಾಮಿ ವಿವೇಕಾನಂದರು ಸ್ವಾಮಿ ಬ್ರಹ್ಮಾನಂದರಿಗೆ ಅಮೆರಿಕಾದಿಂದ ಹೀಗೆ ಬರೆಯುತ್ತಾರೆ: "ಸಂನ್ಯಾಸ ಜೀವನಕ್ಕೆ ಬರುವಂತೆ ಎಲ್ಲರಿಗೂ ಕರೆನೀಡು. ಯಾರಿಗೆ ಆಗ್ರಹವೋ ಎಲ್ಲರೂ ಬರಲಿ. ಪುರುಷನೋ, ಸ್ತ್ರೀಯೋ ನೋಡಬೇಡ. ಕೆಲಸ ಆರಂಭ ಮಾಡು, ನಾನು ಬೇಗ ನಿಮ್ಮ ನಡುವೆ ಬರುತ್ತೇನೆ. ಒಂದು ದೊಡ್ಡ ಆಧ್ಯಾತ್ಮಿಕ ಅಲೆ ಧಾವಿಸಿ ಬರುತ್ತಿದೆ. ಅತ್ಯಂತ ನೀಚನೂ ಇದರ ಹೊಡೆತಕ್ಕೆ ಸಿಕ್ಕು ಉನ್ನತ ಜೀವನವನ್ನು ಪಡೆಯುತ್ತಾನೆ. ಭಗವಂತನ ಕೃಪೆಯಿಂದ ಮೂರ್ಖನೂ ದೊಡ್ಡ ಪಂಡಿತನಾಗುತ್ತಾನೆ. ಏಳಿ, ಎದ್ದೇಳಿ, ಗುರಿಮುಟ್ಟುವವರೆಗೆ ನಿಲ್ಲಬೇಡಿ!"

೧೮೯೬ರಲ್ಲಿ ಒಂದು ದಿನ ಲಂಡನ್ನಿನಲ್ಲಿ ತಮ್ಮ ಬಳಿ ಸೇರಿದ ಸ್ತ್ರೀಪುರುಷರಿಗೆ, ಎದುರಾಗಲಿರುವ ಒಂದು ಆಧ್ಯಾತ್ಮಿಕ ಪರಿವರ್ತನೆಯಲ್ಲಿ ಭಾಗಿಯಾಗುವಂತೆ ಕರೆನೀಡುತ್ತಾ ಸ್ವಾಮೀಜಿ ಹೇಳುತ್ತಾರೆ: "ಈಗ ಈ ಜಗತ್ತಿಗೆ ಬೇಕಾಗಿರುವುದು ಭಗವಂತನಿಗಾಗಿ ಎಲ್ಲವನ್ನೂ ತ್ಯಾಗ ಮಾಡುವ ಎದೆಗಾರಿಕೆ ಇರುವ ತರುಣ ತರುಣಿಯರು. ನಿಮ್ಮಲ್ಲಿ ಯಾರಿಗೆ ಈ ಸಾಹಸವಿದೆ? ಮುಂದೆ ಬನ್ನಿ." ಈ ಆಹ್ವಾನವನ್ನು ನೀಡಿದ ಸ್ವಾಮೀಜಿ ಅತ್ಯಂತ ನಿರೀಕ್ಷೆಯಿಂದ ಎದುರಿಗಿದ್ದ ಮುಖಗಳತ್ತ ದಿಟ್ಟಿಸಿದರು.

ಸ್ವಾಮೀಜಿಯ ಈ ಕರೆಗೆ ಪಾಶ್ಚಾತ್ಯ ದೇಶದ ಮಹಿಳೆಯರಿಂದ ಉತ್ತರ ಸಿಕ್ಕರೂ, ಭಾರತದ ಮಹಿಳೆಯರಿಂದ ಸರಿಯಾದ ಪ್ರತಿಕ್ರಿಯೆ ಸಿಗಲಿಲ್ಲ. ಭಾರತದ ಮಹಿಳೆಯರ ಸಹನೆ, ನಿಷ್ಠೆಗಳನ್ನು ಅವರು ಎಷ್ಟೋ ಕೊಂಡಾಡಿದ್ದರೂ, ಮನೆ, ಮಕ್ಕಳು, ಸಂಸಾರಬಂಧನದ ಹೊರಗೆ ಹೋಗುವ ಸಾಹಸ ಅಂದಿನ ಮಹಿಳೆಯಲ್ಲಿ ಇರಲಿಲ್ಲ. ಆಗಿನ ಕಾಲದಲ್ಲಿ ಮಹಿಳೆಯರನ್ನು ವಿದ್ಯಾಭ್ಯಾಸದಿಂದ ದೂರವಿಡಲಾಗಿತ್ತು. ಜೊತೆಗೆ ಬಾಲ್ಯವಿವಾಹ, ನಾನಾ ರೀತಿಯ ಸಾಮಾಜಿಕ ನಿಯಮಗಳಲ್ಲಿ ಬದ್ಧವಾದ ಜೀವನಕ್ಕೆ ಸಿಕ್ಕಿಸಲಾಗಿತ್ತು.

ಮಹಿಳೆಯರ ಬಗ್ಗೆ ಶ್ರೀರಾಮಕೃಷ್ಣರಲ್ಲಿ ಇದ್ದ ಶ್ರದ್ಧೆ ಹಾಗೂ ಸಮತ್ವಭಾವನೆಯನ್ನು ಸ್ವಾಮೀಜಿ ಉತ್ತರಾಧಿಕಾರಿಯಾಗಿ ಪಡೆದಿದ್ದರು. ಮಹಿಳೆಯರ ಅಧ್ಯಾತ್ಮ ಜಾಗೃತಿಯ ವಿಚಾರವಾಗಿ ಸ್ವಾಮಿ ವಿವೇಕಾನಂದರ ವಿಚಾರಗಳು, ಇತರ ಮಹಾಪುರುಷರು ಅಥವಾ ಸಮಾಜಸುಧಾರಕರಿಗಿಂತ ಅತ್ಯಂತ ಭಿನ್ನ ಹಾಗೂ ಕ್ರಾಂತಿಕಾರಕವಾಗಿದ್ದವು.

ಮಹಿಳೆಯರ ಉನ್ನತಿಗಾಗಿ ಸ್ವಾಮೀಜಿಯ ಪ್ರಯತ್ನ ಕೇವಲ ಸ್ಕೂಲು ಕಾಲೇಜುಗಳ ಸ್ಥಾಪನೆ, ವಿಧವಾಶ್ರಮಗಳ ನಿರ್ಮಾಣಗಳಿಗೆ ಮಾತ್ರ ಸೀಮಿತವಾಗಿತ್ತೇ ಎಂಬ ಪ್ರಶ್ನೆಯನ್ನೆತ್ತಿ, ಸಿಸ್ಟರ್ ಕ್ರಿಸ್ಟೀನ್ ಹೀಗೆ ಉತ್ತರಿಸುತ್ತಾರೆ: "ಇಲ್ಲ, ಈ ರೀತಿಯ ಬೇಕಾದಷ್ಟು ಸಂಸ್ಥೆಗಳು ಸ್ವಾಮೀಜಿಯ ಸಮಯಕ್ಕಿಂತ ಮೊದಲೇ ಸ್ಥಾಪನೆಯಾಗಿದ್ದವು. ಹಾಗೂ ಮುಂದೆ ಇನ್ನೂ ಬರಲಿವೆ. ರಾಮಕೃಷ್ಣ – ವಿವೇಕಾನಂದರು ಈ ಭೂಮಿಯಲ್ಲಿ ಕೇವಲ ಇಷ್ಟು ಮಾತ್ರ ಮಾಡಲು ಅವತರಿಸಿಲ್ಲ. ಪ್ರತಿಯೊಬ್ಬ ಮನುಷ್ಯನ ಒಳಗಿರುವ ಚೈತನ್ಯಶಕ್ತಿಯನ್ನು ಎಚ್ಚರಿಸುವುದೇ ಅವರ ಉದ್ದೇಶವಾಗಿತ್ತು."

ಭೈರವಿ ಬ್ರಾಹ್ಮಣಿಯನ್ನು ಶ್ರೀರಾಮಕೃಷ್ಣರು ಗುರುವಾಗಿ ಸ್ವೀಕರಿಸಿದ್ದರು, ಶ್ರೀಮಾತೆ ಶಾರದಾದೇವಿಯವರಿಗೆ ತಮ್ಮ ತಪಸ್ಸಿನ ಎಲ್ಲಾ ಶಕ್ತಿಯನ್ನು ಧಾರೆ ಎರೆದು ಪೂಜಿಸಿದರು, ರಾಮಕೃಷ್ಣರ ಜೀವನದ ಈ ಎಲ್ಲಾ ಘಟನೆಗಳ ಹಿಂದಿನ ತಾತ್ಪರ್ಯವನ್ನು ಸ್ವಾಮೀಜಿ ಚೆನ್ನಾಗಿ ಗ್ರಹಿಸಿದ್ದರು. "ಜಗತ್ತಿನ ಕಲ್ಯಾಣ ಮಹಿಳೆಯರ ಅಭ್ಯುದಯವಾಗದಿದ್ದರೆ ಆಗದು. ಹಕ್ಕಿ ಒಂದೇ ರೆಕ್ಕೆಯಿಂದ ಹಾರಲಾರದು. ಇದಕ್ಕಾಗಿಯೇ ಶ್ರೀರಾಮಕೃಷ್ಣರು ಒಬ್ಬರು ಮಹಿಳೆಯನ್ನು ಗುರುವಾಗಿ ಸ್ವೀಕರಿಸಿದರು, ನಾರೀಭಾವದಲ್ಲಿ ಸಾಧನೆ ಮಾಡಿದರು ಹಾಗೂ ಮಾತೃಭಾವವನ್ನು ಪ್ರಚಾರ ಮಾಡಿದರು" ಎನ್ನುತ್ತಾರೆ ಸ್ವಾಮೀಜಿ. ಅಮೆರಿಕಾದಲ್ಲಿರುವಾಗಲೇ ತಮ್ಮ ಸೋದರಸಂನ್ಯಾಸಿಗಳಿಗೆ ಬರೆದ ಪತ್ರಗಳಲ್ಲಿ, ಸ್ತ್ರೀಮಠದ ನಿರ್ಮಾಣದ ಬಗ್ಗೆ ಸ್ವಾಮೀಜಿ ವಿವಿಧ ರೀತಿಯಲ್ಲಿ ಸೂಚನೆಗಳನ್ನು ನೀಡಿದ್ದಾರೆ. ಈ ಕೆಲಸಕ್ಕಾಗಿ ರಾಮಕೃಷ್ಣರ ಶಿಷ್ಯೆಯರಾದ ಗೌರಿಮಾ, ಯೋಗಿನ್‌ಮಾ ಮುಂತಾದವರು ಮುಂದೆ ಬರಲಿ ಎಂದು ಕರೆನೀಡುತ್ತಾರೆ. ಭಾರತಕ್ಕೆ ಬಂದ ಮೇಲೆ ಸ್ವಾಮೀಜಿಯವರ ಈ ಭಾವನೆ ಮತ್ತೂ ದೃಢವಾದ ಹಾಗೂ ಸ್ಪಷ್ಟವಾದ ರೂಪವನ್ನು ಪಡೆಯಿತು. ೧೮೯೭ ರಲ್ಲಿ ರಾಮಕೃಷ್ಣ ಮಿಷನ್ ಆರಂಭವಾದ ನಂತರ ರೂಪಿಸಿದ ರಾಮಕೃಷ್ಣ ಮಠದ ನಿಯಮಗಳಲ್ಲಿ, ಮಹಿಳೆಯರು ಸಂನ್ಯಾಸ ಸ್ವೀಕರಿಸುವ ಬಗ್ಗೆ ಹಾಗೂ ಅವರಿಗಾಗಿ ಸ್ವತಂತ್ರವಾದ ಮಠವನ್ನು ಸ್ಥಾಪಿಸುವ ಬಗ್ಗೆ ಸ್ವಾಮಿ ವಿವೇಕಾನಂದರು ಸ್ಪಷ್ಟವಾದ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

೧೯೦೧ ರಲ್ಲಿ ಬೇಲೂರು ಮಠದಲ್ಲಿ ಸ್ವಾಮೀಜಿ, ತಮ್ಮ ಶಿಷ್ಯರಾದ ಶರತ್ ಚಕ್ರವರ್ತಿಯ ಎದುರಿಗೆ ತಮ್ಮ ಮನಸ್ಸಿನಲ್ಲಿ ಕೊರೆಯುತ್ತಿದ್ದ ಈ ವಿಚಾರವನ್ನು ಬಿಚ್ಚಿ ಹೇಳುತ್ತಾರೆ: "ಶ್ರೀಮಾತೆಯನ್ನು ಕೇಂದ್ರವಾಗಿಟ್ಟುಕೊಂಡು ಮಹಿಳೆಯರಿಗಾಗಿ ಒಂದು ಮಠವನ್ನು

ಆರಂಭಿಸಬೇಕು... ಗಂಗೆಯ ಪೂರ್ವದಡದಲ್ಲಿ ಇದಕ್ಕಾಗಿ ಒಂದು ವಿಶಾಲವಾದ ಜಮೀನನ್ನು ಕೊಳ್ಳಬೇಕು... ರಾಮಕೃಷ್ಣ ಮಠವು ಹೇಗೆ ಬ್ರಹ್ಮಚಾರಿಗಳ ಹಾಗೂ ಸಂನ್ಯಾಸಿಗಳ ಸಾಧನೆಯ ಸ್ಥಾನವಾಗಿದೆಯೋ ಹಾಗೆಯೋ ಆ ಮಠದಲ್ಲಿ ಬ್ರಹ್ಮಚಾರಿಣಿಯರ, ಸಂನ್ಯಾಸಿನಿಯರ ಸಾಧನೆ ನಡೆಯಬೇಕು."

ತಮ್ಮ ಈ ಆಲೋಚನೆಗಳನ್ನು ಮುಂದಿಟ್ಟು ಸ್ವಾಮೀಜಿ ಶರತ್‌ಚಂದ್ರ ಚಕ್ರವರ್ತಿಯನ್ನು ದಂಗುಬಡಿಸಿದರು. ವಿದ್ಯಾವಂತನಾದ ಈ ಯುವಕನು, ಸ್ವಾಮೀಜಿಯ ಈ ವಿಚಾರಗಳು ಕೇವಲ ಹಗಲುಗನಸು ಎಂದು ಭಾವಿಸಿ ಪ್ರಶ್ನಿಸಿದನು. "ಸ್ವಾಮೀಜಿ, ನಿಮ್ಮ ಈ ಕಲ್ಪನೆ ತುಂಬ ಒಳ್ಳೆಯದೆ. ಆದರೆ ಹುಡುಗಿಯರು ನಿಮಗೆ ಎಲ್ಲಿ ಸಿಗುತ್ತಾರೆ ? ಈ ಸಮಾಜದ ಕಠಿಣವಾದ ನಿಯಮಗಳನ್ನು ಮುರಿದು, ತಮ್ಮ ಹೆಣ್ಣುಮಕ್ಕಳನ್ನು ಯಾರು ತಾನೆ ನಿಮ್ಮ ಮಠಕ್ಕೆ ಕಳಿಸುತ್ತಾರೆ?"

ವ್ಯಾವಹಾರಿಕ ಜಗತ್ತಿರಲಿ ಅಥವಾ ಆಧ್ಯಾತ್ಮಿಕ ಜಗತ್ತಿರಲಿ, ಸ್ವಾಮೀಜಿ ಸ್ತ್ರೀಪುರುಷರೆಂಬ ಯಾವ ಭೇದದೃಷ್ಟಿಯನ್ನೂ ಇಟ್ಟುಕೊಂಡಿರಲಿಲ್ಲ. "ಆತ್ಮದಲ್ಲಿ ಯಾವ ಲಿಂಗಭೇದವೂ ಇಲ್ಲ. ಗಂಡಸು ಹೆಂಗಸು ಇತ್ಯಾದಿ ಹೀನಭಾವಗಳನ್ನು ಮನಸ್ಸಿನಿಂದ ಕಿತ್ತುಹಾಕಿ. ಎಲ್ಲವೂ ಆತ್ಮ" ಎಂದು ಗರ್ಜಿಸುತ್ತಾರೆ ಸ್ವಾಮೀಜಿ. ಸೋದರಿ ನಿವೇದಿತಾ ಹೇಳುತ್ತಾರೆ, "ಯಾವ ಸಾಮಾಜಿಕ ವ್ಯವಸ್ಥೆಯಲ್ಲಿ ಆತ್ಮ ಹಾಗೂ ಮನಸ್ಸಿಗಿಂತ ಶರೀರಕ್ಕೇ ಪ್ರಾಮುಖ್ಯತೆಯನ್ನು ಕೊಡಲಾಗುತ್ತದೆಯೋ, ಅಂತಹ ಸಾಮಾಜಿಕ ರೀತಿನೀತಿಗಳನ್ನು ಸ್ವಾಮೀಜಿ ಎಂದಿಗೂ ಸಹಿಸುತ್ತಿರಲಿಲ್ಲ."

ಸಂಘಶಕ್ತಿಯಿಂದ ಅನೇಕ ಮಹಾಕಾರ್ಯಗಳ ಸಾಧನೆ ಮಾಡಬಹುದೆಂದು ತಿಳಿದಿದ್ದ ಸ್ವಾಮೀಜಿ, ಭಾರತದಲ್ಲಿ ಸಂನ್ಯಾಸಿಗಳ ಸಂಘವನ್ನು ಆರಂಭಿಸಿದರೆ ಒಬ್ಬನ ಸ್ವಂತ 'ಮೋಕ್ಷ ಸಾಧನೆ ಮತ್ತು ಜಗತ್ತಿನ ಉಪಕಾರ' ಎರಡೂ ಒಟ್ಟಿಗೆ ಸಾಧ್ಯವಾಗುತ್ತದೆಂದು ಯೋಚಿಸಿದರು. ಅದಕ್ಕಾಗಿ ಅಮೆರಿಕಾದಲ್ಲಿರುವಾಗಲೇ ತಮ್ಮ ಸೋದರ ಸಂನ್ಯಾಸಿಗಳಿಗೆ, ಎಲ್ಲರೂ ಒಟ್ಟಾಗಿ ಈ ಜಗತ್ತಿನ ಹಿತಕ್ಕಾಗಿ ದುಡಿಯಬೇಕೆಂದು ಅತ್ಯಂತ ವ್ಯಾಕುಲತೆಯಿಂದ ಕರೆನೀಡಿದರು. ಸಮಾಜ ಸುಧಾರಣೆಯ ಕೆಲಸಕ್ಕಿಂತ ಸಂನ್ಯಾಸಿ ಸಂಘದ ಕೆಲಸ ಮಹತ್ತಾದುದು. ಇದಕ್ಕೆ ಕಾರಣವನ್ನು ಸ್ವಾಮೀಜಿ ಹೀಗೆ ಹೇಳುತ್ತಾರೆ: "ತ್ಯಾಗವೇ ಮುಖ್ಯವಾದದ್ದು. ತ್ಯಾಗಿಯಾಗದಿದ್ದರೆ ಬೇರೆಯವರಿಗೆ ಪ್ರಾಣಕೊಟ್ಟು ಕೆಲಸ ಮಾಡಲು ಯಾರಿಗೂ ಸಾಧ್ಯವಾಗುವುದಿಲ್ಲ. ತ್ಯಾಗಿಯಾದವನು ಎಲ್ಲರನ್ನೂ ಸಮಭಾವದಲ್ಲಿ ನೋಡಿ, ಎಲ್ಲರ ಸೇವೆ ಮಾಡಲು ಮುಂದುವರೆಯುತ್ತಾನೆ."

**'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ಹೊಸ ದೃಷ್ಟಿಯನ್ನು ತಾವು ರೂಪಿಸಿದ ಸಂನ್ಯಾಸಿ ಸಂಘಕ್ಕೆ ಸ್ವಾಮೀಜಿ ನೀಡಿದರು. ಸ್ತ್ರೀಮಠವನ್ನೇ ಮೊದಲು ಆರಂಭಿಸಲು ಸ್ವಾಮೀಜಿಯ ಇಚ್ಛೆ ಇದ್ದರೂ, ಅಂದಿನ ಸಮಾಜದ ಪರಿಸ್ಥಿತಿ ಇದಕ್ಕೆ ಅಡಚಣೆ ತಂದಿತು. ವಿದ್ಯಾಭ್ಯಾಸದ ಅಗತ್ಯವನ್ನು



ಅರಿತು ಸ್ವಾಮೀಜಿ, ಮಹಿಳೆಯರಿಗಾಗಿ ಒಂದು ವಿದ್ಯಾಲಯವನ್ನು ಆರಂಭಿಸುವ ಯೋಜನೆ ಹಾಕಿದರು. ವಿದ್ಯಾವಂತಳಾದ ಒಬ್ಬ ಮಹಿಳೆಯಾದರೂ ಸಹಾಯಕ್ಕೆ ಮುಂದೆ ಬಂದರೆ ಈ ಕೆಲಸದ ದಾರಿ ಸುಗಮವಾಗುತ್ತದೆ ಎಂದು ಆಶಿಸಿ, ಅಂದಿನ 'ಭಾರತಿ' ಎಂಬ ಪತ್ರಿಕೆಯ ಸಂಪಾದಕರಾದ ಸರಳಾ ಘೋಷಾಲ್‌ರವರಿಗೆ ಸ್ವಾಮೀಜಿ ಈ ಬಗ್ಗೆ ಪತ್ರವನ್ನೂ ಬರೆದರು. ಆಕೆಯಿಂದ ಅವರು ನಿರೀಕ್ಷಿಸಿದ್ದ ಪ್ರತಿಕ್ರಿಯೆ ಸಿಗಲಿಲ್ಲ. ಇನ್ನು ಕೆಲವರು ಮಹಿಳೆಯರು, ಕ್ರಿಶ್ಚಿಯನ್ ಮಿಷನರಿಗಳ ಪ್ರಭಾವಕ್ಕೆ ಒಳಗಾಗಿ, ಹಿಂದೂಧರ್ಮದ ವಿರುದ್ಧವಾಗಿ ಪ್ರಚಾರಕ್ಕೆ ಇಳಿದಿದ್ದರು. ಇಂಥ ಸಂಕುಚಿತ ದೃಷ್ಟಿಯುಳ್ಳವರಿಂದಲೂ ಯಾವುದೇ ಮಹತ್‌ಕಾರ್ಯ ನಡೆಯಲು ಸಾಧ್ಯವಿರಲಿಲ್ಲ. ಕಡೆಯಲ್ಲಿ ಐರಿಶ್ ಮಹಿಳೆ ಮಾರ್ಗರೆಟ್ ನೊಬೆಲ್ ಸ್ವಾಮೀಜಿಯವರು ಯೋಜಿಸಿಕೊಂಡಿದ್ದ ಭಾರತದ ಕೆಲಸಕ್ಕೆ ತಮ್ಮ ಜೀವನವನ್ನು ಕೊಡಲು ಸಿದ್ಧರಾಗಿ, ೧೮೯೮ ರಲ್ಲಿ ಭಾರತಕ್ಕೆ ಬಂದರು. ಅವರು ಸ್ವಾಮಿ ವಿವೇಕಾನಂದರಿಂದ ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿ 'ನಿವೇದಿತಾ' ಎಂಬ ಹೆಸರನ್ನು ಪಡೆದರು.

ನಿವೇದಿತಾ ಸ್ವಾಮೀಜಿಯನ್ನು, ತಮ್ಮನ್ನು ಭಾರತದ ಕೆಲಸಕ್ಕೆ ಬರಲು ಹೇಳಿರುವುದರಲ್ಲಿ ಅವರಿಗೆ ನಿರ್ದಿಷ್ಟವಾದ ಏನಾದರೂ ಉದ್ದೇಶವಿದೆಯೆ ಎಂದು ಪ್ರಶ್ನೆ ಹಾಕುತ್ತಾರೆ. ಇದಕ್ಕೆ ಸ್ವಾಮೀಜಿ ಕೊಟ್ಟ ಉತ್ತರ ಅತ್ಯಂತ ವಿಶಿಷ್ಟವಾದುದು. ಸ್ವಾಮೀಜಿ ಆಕೆಗೆ ಹೇಳುತ್ತಾರೆ, "ಪ್ರತಿಯೊಬ್ಬ ವ್ಯಕ್ತಿಗೂ ಅವರ ಒಳಗಿರುವ ಆಧ್ಯಾತ್ಮಿಕ ಚೇತನದ ಬಗ್ಗೆ ಅರಿವು ಉಂಟಾಗುವಂತೆ ಮಾಡುವುದೇ ಜೀವನ ವ್ರತ. ವಿದ್ಯಾಲಯವೊಂದರ ಪ್ರತಿಷ್ಠಾಪನೆ ಇಲ್ಲಿ ಮುಖ್ಯವಲ್ಲ." ಸ್ವಾಮೀಜಿಯ ಈ ಉತ್ತರ, ವಿದ್ಯಾಲಯದ ಆರಂಭದ ಮೊದಲು ನಿವೇದಿತಾ ಬ್ರಹ್ಮಚರ್ಯ ವ್ರತ ಸ್ವೀಕರಿಸಿದ್ದು, ಸ್ವಾಮೀಜಿ ಆಕೆಯನ್ನು ಶ್ರೀಮಾತೆ ಶಾರದಾದೇವಿಯವರ ಆಶ್ರಯದಲ್ಲಿ ಬಿಟ್ಟಿದ್ದು – ಈ ಮುಂತಾದ ಘಟನೆಗಳಿಂದ ಸ್ವಾಮೀಜಿಗೆ ಸಂನ್ಯಾಸಿನಿಯರ ಸಂಘವನ್ನು ಆರಂಭಿಸುವುದೇ ಮುಖ್ಯ ಉದ್ದೇಶವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಈ ಸಮಯದಲ್ಲಿ ನಡೆದ ಒಂದು ಘಟನೆ ಸ್ವಾಮೀಜಿಯ ಈ ಸಂಕಲ್ಪವನ್ನು ಹೊರಜಗತ್ತಿನ ಎದುರು ಬಹಿರಂಗಗೊಳಿಸುತ್ತದೆ. ಭಾರತಕ್ಕೆ ಬಂದ ಮೇಲೆ ಕೊಲ್ಕತಾದ ಸ್ಟಾರ್ ಥಿಯೇಟರಿನಲ್ಲಿ ನಿವೇದಿತಾ ಮೊದಲ ಬಾರಿ ಭಾಷಣ ಮಾಡಿದರು. ಇದರ ಮರುದಿವಸ, ತಮ್ಮನ್ನು ಕಾಣಲು ಬಂದ ಯುವಕನೊಬ್ಬನನ್ನು ಸ್ವಾಮೀಜಿ ಕೇಳಿದರು: "ನಿನ್ನೆಯ ಸಭೆ ಹೇಗಿತ್ತು ? ನಿವೇದಿತಾರ ಭಾಷಣ ಕೇಳಿದ ನಂತರ ಜನರ ಪ್ರತಿಕ್ರಿಯೆ ಏನು?" ಅಲ್ಲೇ ಇದ್ದ ಸ್ವಾಮಿ ಯೋಗಾನಂದರು ಹೇಳಿದರು, "ಸ್ವಾಮೀಜಿ, ಇಲ್ಲಿಯ ಜನರು ಆನಿಬೆಸೆಂಟರ ಭಾಷಣವನ್ನು ಕೇಳಿದ್ದಾರೆ. ನಿವೇದಿತಾರ ಈ ಹದಿನೈದು ನಿಮಿಷಗಳ ಭಾಷಣ ಆನಿಬೆಸೆಂಟರ ಭಾಷಣದೆದುರು ಸಪ್ಪೆಯಾಗಿ ಕಾಣುತ್ತದೆ." ಸ್ವಾಮೀಜಿಯ ಮುಖ ಕೆಂಪಾಗಿ ಹೋಯಿತು. ಅವರು ಸ್ವರವನ್ನು ಏರಿಸಿ ಹೇಳಿದರು, "ನಿವೇದಿತಾಳ ಕೆಲಸದ ಶಕ್ತಿ ಏನೆಂದು ಮುಂದೆ ನಿಮಗೆ ಗೊತ್ತಾಗುತ್ತದೆ. ಆಕೆಯದ್ದು ಪವಿತ್ರವಾದ ವಿಶಾಲವಾದ ಮನಸ್ಸು. ಆಕೆಯಂಥ ಇನ್ನಿಬ್ಬರು ಮಹಿಳೆಯರು ಮುಂದೆ ಬಂದರೆ, ಕೇವಲ ಈ ಬಂಗಾಳದಲ್ಲಿ ಮಾತ್ರವಲ್ಲ, ಭಾರತದ ಪ್ರತಿ ರಾಜ್ಯದಲ್ಲೂ ಒಂದೊಂದು ಮಹಿಳೆಯರ ಮಠವನ್ನು ಆರಂಭಿಸಿಬಿಡಬಹುದಾಗಿತ್ತು. ಇದರಿಂದ ಸ್ತ್ರೀಯರಲ್ಲಿ ಜಾಗೃತಿ ಉಂಟಾಗಿ ಅವರವರ ಸಮಸ್ಯೆಗಳನ್ನು ಅವರೇ ನಿವಾರಿಸಿಕೊಳ್ಳುತ್ತಿದ್ದರು."

ತ್ಯಾಗ ವೈರಾಗ್ಯಗಳ ಜೀವನವು ವ್ಯಕ್ತಿಯನ್ನು ಪವಿತ್ರಗೊಳಿಸಿ ಗೌರವಯುತವಾದ ಸ್ಥಾನಕ್ಕೆ ಏರಿಸುತ್ತದೆ. ಹಾಗಾಗಿ ಅಧೋಗತಿಗೆ ಇಳಿದಿರುವ ಸಮಾಜದ ಈ ಅಂಶಕ್ಕೆ ಅಗತ್ಯವಾದದ್ದು, 'ಆಧ್ಯಾತ್ಮಿಕ ಶಕ್ತಿ ಸಂಚಾರ.' "ಒಬ್ಬ ಮಹಿಳೆ ಬ್ರಹ್ಮಜ್ಞಳಾದರೆ ಅವಳ ಪ್ರಭಾವದಿಂದ ಸಾವಿರಾರು ಮಹಿಳೆಯರ ಜಾಗೃತಿಯಾಗುತ್ತದೆ" ಎನ್ನುತ್ತಾರೆ ಸ್ವಾಮೀಜಿ. ಪವಿತ್ರತಾಸ್ವರೂಪಿಣಿಯಾದ ಶ್ರೀಮಾತೆ ಶಾರದಾದೇವಿಯವರೇ ಮಹಿಳೆಯರ ಮುಕ್ತಿಯ ಪ್ರೇರಕಶಕ್ತಿ ಎನ್ನುವುದನ್ನು ಸ್ವಾಮೀಜಿ ಮೊದಲಿನಿಂದಲೂ ತಿಳಿದಿದ್ದರು. ಶ್ರೀಮಾತೆಯನ್ನು 'ಜೀವಂತ ದುರ್ಗೆ' ಎಂದು ಸ್ವಾಮೀಜಿ ಕರೆದಿದ್ದಾರೆ. "ಶ್ರೀಮಾತೆಯ ಆವಿರ್ಭಾವದಿಂದ ಜಗತ್ತಿನಲ್ಲಿ ಮಹಾಶಕ್ತಿಯ ಜಾಗೃತಿಯಾಗುತ್ತದೆ... ಅವರನ್ನು ಅವಲಂಬಿಸಿ, ಬಹುಜನ ಸಾಧಕಿಯರು ಆಧ್ಯಾತ್ಮಿಕ ಉನ್ನತಿಯನ್ನು ಪಡೆಯುತ್ತಾರೆ" ಎಂಬ ಭವಿಷ್ಯದ್ವಾಣಿಯನ್ನು ಸ್ವಾಮೀಜಿ ನುಡಿಯುತ್ತಾರೆ.

ಶ್ರೀಮಾತೆಯ ಜೀವನ ನಿವೇದಿತಾರ ದೃಷ್ಟಿಯಲ್ಲಿ 'One long stillness of prayer' – 'ಪ್ರಾರ್ಥನೆಯ ಒಂದು ಸುದೀರ್ಘ ನೀರವತೆ.' ಸ್ವಾಮೀಜಿಯವರ ಜೀವನ ಮತ್ತು ಉಪದೇಶಗಳನ್ನು ಅನುಸರಿಸುತ್ತಿದ್ದ ನಿವೇದಿತಾ ಶ್ರೀಮಾತೆಯವರ ಮಹಿಮೆಯನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡಿದ್ದರು. ಶ್ರೀಮಾತೆಯನ್ನು ಕುರಿತು ನಿವೇದಿತಾ ತಮ್ಮ ದಿನಚರಿಯಲ್ಲಿ ಹೀಗೆ ಬರೆಯುತ್ತಾರೆ : "ಅವರ ಸಾನ್ನಿಧ್ಯ ನಮ್ಮನ್ನು ಪವಿತ್ರಗೊಳಿಸುತ್ತದೆ. ನಾವೂ ಅವರಂತೆ ಆಗಬೇಕೆನ್ನುವುದೇ ಶ್ರೀರಾಮಕೃಷ್ಣರ ಇಚ್ಛೆ."

ನಿವೇದಿತಾ ಬಾಗ್‌ಬಜಾರಿನಲ್ಲಿ, ಶ್ರೀಮಾತೆಯ ವಾಸಸ್ಥಾನದ ಬಳಿಯೇ ತಮ್ಮ ಶಾಲೆಯನ್ನು ಆರಂಭಿಸಿದರು. ೧೮೯೮ ರ ನವೆಂಬರ್ ತಿಂಗಳಲ್ಲಿ ನಿವೇದಿತಾ ಆರಂಭಿಸಿದ ಈ ಶಾಲೆಯನ್ನು, ಶ್ರೀಮಾತೆಯಿಂದಲೇ ಪೂಜೆ ಮಾಡಿಸಿ, ಸ್ವಾಮೀಜಿ ಆರಂಭಿಸಿದರು. ವಿದೇಶದವರಾದ ನಿವೇದಿತಾ ಶ್ರೀಮಾತೆಗೆ ತೋರಿಸುತ್ತಿದ್ದ ಭಕ್ತಿ ಶ್ರದ್ಧೆಗಳು, ವಿದ್ಯಾಲಯದ ವಿದ್ಯಾರ್ಥಿನಿಯರ ಮೇಲೆಯೂ ಆಳವಾದ ಪರಿಣಾಮವನ್ನು ಬೀರಿದವು. ಬಾಗ್‌ಬಜಾರಿನ ಸಿಸ್ಟರ್ ನಿವೇದಿತಾ ಗರ್ಲ್ಸ್ ಸ್ಕೂಲ್, ಶ್ರೀರಾಮಕೃಷ್ಣರ ಭಾವಧಾರೆಯಿಂದ ಆರಂಭವಾದ ಮೊಟ್ಟಮೊದಲನೆಯ ಶಾಲೆ ಎನ್ನುವುದು ಹೆಣ್ಣುಮಕ್ಕಳಿಗೆಲ್ಲ ಹೆಮ್ಮೆಯ ವಿಷಯ.

ಸ್ವಾಮೀಜಿಯಿಂದ ಅಮೇರಿಕಾದಲ್ಲಿಯೇ ಬ್ರಹ್ಮಚರ್ಯ ದೀಕ್ಷೆ ಪಡೆದಿದ್ದ ಸಿಸ್ಟರ್ ಕ್ರಿಸ್ಟೀನ್, ಸ್ವಾಮೀಜಿಯ ಕೆಲಸದಲ್ಲಿ ನಿವೇದಿತಾರಿಗೆ ಸಹಾಯಮಾಡಲೆಂದು ೧೯೦೨ ರಲ್ಲಿ ಭಾರತಕ್ಕೆ ಬಂದರು. ಶ್ರೀಮಾತೆಯೇ ಈ ಇಬ್ಬರು ವಿದೇಶಿ ಮಹಿಳೆಯರ ಶಾಂತಿಯ ಆಸರೆಯಾಗಿದ್ದರು. ೧೯೦೬ ರಲ್ಲಿ ಅತ್ಯಂತ ಪ್ರೌಢವ್ಯಕ್ತಿತ್ವದ, ಸ್ವತಂತ್ರ ಮನೋಭಾವದ ಹದಿನೇಳು ವರ್ಷಗಳ ತರುಣಿ ಸುಧೀರಾ ಬಸು ಸಿಸ್ಟರ್ ನಿವೇದಿತಾರ ಸಹಾಯಕಿಯಾಗಿ ಬಂದರು. ಆಕೆಯ ಅಣ್ಣ ದೇವವ್ರತ ಬಸು ರಾಮಕೃಷ್ಣ ಮಠದ ಸಂನ್ಯಾಸಿಗಳಾಗಿ ಸ್ವಾಮಿ ಪ್ರಜ್ಞಾನಂದ ಎಂಬ ಸಂನ್ಯಾಸದ ಹೆಸರನ್ನು ಪಡೆದಿದ್ದರು.